1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ

ಚಿಕ್ಕೋಡಿ

CC No.:-4177/2023

C.W.:-4

P.W.:-3

| | |
|---|---|
| ಸಾಕ್ಷಿದಾರನ ಹೆಸರು | ಸಂದೇಶ ಸುಳೆ |
| ತಂದೆಯ ಹೆಸರು | ಸಂಜಯ |
| ವಯಸ್ಸು | 25 ವರ್ಷ |
| ಕೆಲಸ | ಖಾಸಗಿ ಉದ್ಯೋಗ |
| ವಾಸ | ನನದಿ |

ಸಾಕ್ಷಿಗೆ ಈ ದಿನ ದಿಃ 11-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾ ಸಾ 5 ರವರ ಪರಿಚಯ ಇರುವುದಿಲ್ಲ.

ದಿಃ07.08.2023 ರಂದು ಯಕ್ಸಂಬೆ ಮತ್ತು ನಾಯಿಕ ರವರ ಜಗಳ ಆಗಿರುತ್ತದೆ. ಅದಕ್ಕೆ ನಾನು ಮತ್ತು ಚಾಸಾ 5 ರವರು ಪೊಲೀಸ ಠಾಣೆಗೆ ಕರೆಯಿಸಿ ರಾಡ್ ಜಪ್ತಿ ಪಂಚನಾಮೆಯನ್ನು ಮಾಡುವ ಕಾಲಕ್ಕೆ ಹಾಜರು ಇರಲು ಹೇಳಿದ್ದರಿಂದ ನಾವು ಪೊಲೀಸ ಠಾಣೆಗೆ ಹೋಗಿರುತ್ತೇವೆ. ಪೊಲೀಸ ಠಾಣೆಯಲ್ಲಿ ಪೊಲೀಸರು ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ರಾಡ್ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ.

ಸಾಕ್ಷಿಯು ಜಪ್ತ ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4ಎ ಎಂದು ಗುರುತಿಸಲಾಯಿತು. ರಾಡ್ ಜಪ್ತಿ ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಭಾವ ಚಿತ್ರವನ್ನು ತೆಗೆದಿರುತ್ತಾರೆ. ಅದರಲ್ಲಿ ನಾನು ಕಂಡು ಬರುತ್ತೇನೆ. ಸಾಕ್ಷಿ ಸದರಿ ಭಾವ ಚಿತ್ರವನ್ನು ನೋಡಿ ಗುರುತಿಸಿದ್ದರಿಂದ ನಿಪಿ 5 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯು ಪೊಲೀಸರು ಆ ದಿನ ಮದ್ಯಾಹ್ನ 3.00 ಗಂಟೆಯಿಂದ 4.00 ಗಂಟೆ ವರೆಗೆ ಮಾಡಿರುತ್ತಾರೆ.

ಮುದ್ದೆ ಮಾಲು 1 ರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ಮುದ್ದೆ ಮಾಲು 1ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

ಪಂಚನಾಮೆ ಕಾಲಕ್ಕೆ ಹಾಜರು ಇರಲು ಯಕ್ಸಂಬೆ ರವರು ಕರೆಯಿಸಿರುತ್ತಾರೆ. ಮುದ್ದೆ ಮಾಲು 1 ರ ಉದ್ದ ಅಗಲ ಅಳತೆಯನ್ನು ಪೊಲೀಸರು ನನ್ನ ಸಮಕ್ಷಮ ಮಾಡಿರುವುದಿಲ್ಲ. ಅದನ್ನು ಯಾರು ಹಾಜರು ಪಡಿಸಿರುತ್ತಾರೆ ಎನ್ನುವುದು ಗೊತ್ತಿಲ್ಲ. ನಿಪಿ4 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಪೊಲೀಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಪೊಲೀಸರ ಹೇಳಿಕೆ ಮೇರೆಗೆ ನಿಪಿ4 ರ ಮೇಲೆ ಸಹಿ ಮಾಡಿರುತ್ತೇನೆ. ಅದೇ ರೀತಿ ಪೊಲೀಸರ ಹೇಳಿಕೆ ಮೇರೆಗೆ ನಿಪಿ5 ರಂತೆ ಭಾವ ಚಿತ್ರ ತೆಗೆಯುವ ಕಾಲಕ್ಕೆ ನಿಂತಿರುತ್ತೇನೆ. ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ